ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಯ ಬಗ್ಗೆ.

೧೧೮೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).——ಮಾನ್ಯ ಆರೋಗ್ಯ ಮಂತ್ರಿ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿಯ ಕೆ. ಎಂ. ಸಿ. ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಆಸ್ಪತ್ರೆಯ ವಿಭಾಗದಲ್ಲಿ ಸದ್ಯ ಕೆಲಸ ಮಾಡುತ್ತಿರುವ ವೈದ್ಯರುಗಳು ಎಷ್ಟು ? (ಪುರುಷರು ಮತ್ತು ಸ್ತ್ರೀ ವೈದ್ಯರು)

ಇ) ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ಸಂಖ್ಯೆ ಎಷ್ಟು ? (ಪುರುಷ ಮಂತ್ರಿ ಸ್ತ್ರೀ ವೈದ್ಯರು)

ಈ) ಮೂರನೇ ಮತ್ತು ನಾಲ್ಕನೇ ದರ್ಜೆ ನೌಕರರ ಸಂಖ್ಯೆ ಎಷ್ಟು ?

ಉ) ಆಸ್ಪತ್ರೆಗೆ ಸಂದರ್ಶನ ನೀಡುತ್ತಿರುವ ಗೌರವ ವೈದ್ಯರುಗಳ ಸಂಖ್ಯೆ ಎಷ್ಟು ?

ಊ) ದಿನಂಪ್ರತಿ ಚಿಕಿತ್ಸೆ ಪಡೆಯುವವರ ಹೊರ ರೋಗಿಗಳ ಸಂಖ್ಯೆ ಎಷ್ಟು ?

ಋ) ೧೯೮೧ ರಿಂದ ಈವರೆಗೆ ದಾಖಲಾದ ನಂತರ ಆಸ್ಪತ್ರೆಯಲ್ಲಿ ಸತ್ತ ರೋಗಿಗಳ ಸಂಖ್ಯೆ ಎಷ್ಟು ?

ೠ) ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕಿರಿಯ ವೈದ್ಯರುಗಳ ಸಂಖ್ಯೆ ಎಷ್ಟು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಸಚಿವರು).—

ಅ) ೭೯೦.

ಆ) ೨೧ ವೈದ್ಯರು ೧೨ ಮಹಿಳಾ ವೈದ್ಯರು (ಇವರಲ್ಲದೆ ೪೧ ಮಂದಿ ಪ್ರಾಧ್ಯಾಪಕರು ೨೯ ಸಹ ಪ್ರಾಧ್ಯಾಪಕರು ಮತ್ತು ಕೆಳ ಮಂದಿ ಉಪನ್ಯಾಸಕರೂ ಕೆಲಸ ಮಾಡುತ್ತಿದ್ದಾರೆ)

ಇ) ಶುಶ್ರೂಷಕರು (ಪುರುಷ) ೭

ಶುಶ್ರೂಷಕರು (ಮಹಿಳಾ) ೧೧೪ (ಇವರಾರು ವೈದ್ಯರಲ್ಲ)

ಈ) ಮೂರನೇ ದರ್ಜೆ ನೌಕರರು ೭೨

ನಾಲ್ಕನೇ ದರ್ಜೆ ನೌಕರರು ೩೫೫ (ಇದರಲ್ಲಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ೧೨೪ ಜನ ಮೂರನೇ ದರ್ಜೆಯ ನೌಕರರಂ ಮತ್ತು ೧೭೧ ಜನ ನಾಲ್ಕನೆ ದರ್ಜೆಯವರು ಕೆಲಸ ಮಾಡುತ್ತಿದ್ದಾರೆ)

ಉ) ಯಾರೂ ಇಲ್ಲ,

ಊ) ಹೊರ ರೋಗಿಗಳ ಸರಾಸರಿ ಸಂಖ್ಯೆ ೮೮೯.

ಋ) ದಾಖಲಾದ ೧, ೩೨,೫೧೭ ರೋಗಿಗಳಲ್ಲಿ ೬೫೧೪ ರೋಗಿಗಳು ಸತ್ತರು.

ೠ) ೭೯.

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಬಗ್ಗೆ,

೧೨೮೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು (ಸರ್ಕಾರಿ, ಖಾಸಗಿ ಹಾಗೂ ಅನುದಾನ ಪಡೆಯುವ ಕಾಲೇಜುಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಒದಗಿಸುವುದು)

ಆ) ಸದರಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಕಾಲೇಜುವಾರು ಮಾಹಿತಿ ಒದಗಿಸುವುದು)

ಇ) ಮೇಲ್ಕಂಡ ವಿದ್ಯಾರ್ಥಿಗಳ ಪೈಕಿ ಅನುಸೂಚಿತ ಜಾತಿ ಪಂಗಡಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಕಾಲೇಜುವಾರು ಮಾಹಿತಿ ಒದಗಿಸುವುದು)

ಈ) ಸದರಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳ ಸಂಖ್ಯೆ ಎಷ್ಟು ಮತ್ತು ಖಾಸಗಿ ಸೀಟುಗಳ ಸಂಖ್ಯೆ ಎಷ್ಟು ಹಾಗೂ ಅನುಸೂಚಿತ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಎಷ್ಟು ಉಚಿತ ಸೀಟುಗಳನ್ನು ಒದಗಿಸಲಾಗಿದೆ.?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಆಬ್ಕಾರಿ ಸಚಿವರು).—

ಅ) ಸರ್ಕಾರಿ ಕಾಲೇಜುಗಳು ... ೪
ಖಾಸಗಿ ಕಾಲೇಜುಗಳು ... ೧೩
ಅನುದಾನ ಪಡೆಯುವ
ಕಾಲೇಜುಗಳು ಯಾವುದೂ ಇಲ್ಲ —
ಒಟ್ಟು ೧೭

ಆ)	೧ ಬೆಂಗಳೂರು ಮೆಡಿಕಲ್ ಕಾಲೇಜು	...	೯೦೮
	೨ ಮೈಸೂರು ಮೆಡಿಕಲ್ ಕಾಲೇಜು		೬೨೦
	೩ ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ	...	೫೬೦
	೪ ಬಳ್ಳಾರಿ ಮೆಡಿಕಲ್ ಕಾಲೇಜು	...	೫೬೬
	೫ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಬೆಂಗಳೂರು	...	೩೦೧
	* ೬ ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು	...	...
	* ೭ ಕೆಂಪೇಗೌಡ್ಡ ಮೆಡಿಕಲ್ ಕಾಲೇಜು, ಬೆಂಗಳೂರು	...	...
	೮ ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು	...	೯೧೨
	೯ ಕಸ್ತೂರ್ಬಾ ಮೆಡಿಕಲ್ ಕಾಲೇಜು ಮಂಗಳೂರು ಮಣಿಪಾಲ	...	...
	೧೦ ಜೆ. ಜೆ. ಎಂ. ಮೆಡಿಕಲ್ ಕಾಲೇಜು, ದಾವಣಗೆರೆ	...	೯೨೫
	೧೧ ಜೆ. ಎನ್. ಮೆಡಿಕಲ್ ಕಾಲೇಜು, ಬೆಳಗಾಂ	...	೬೮೧
	೧೨ ಎಂ. ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ	...	೬೯೪
	೧೩ ಅಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ	...	೩೨೧
	* ೧೪ ಜೆ. ಎಸ್. ಎಸ್. ಮೆಡಿಕಲ್ ಕಾಲೇಜು, ಮೈಸೂರು,	...	...
	* ೧೫ ಆದಿಚುಂಚನಗಿರಿ ಮೆಡಿಕಲ್ ಕಾಲೇಜು, ಬೆಳ್ಳೂರು, ಮಂಡ್ಯ ಜಿಲ್ಲೆ	...	...
	೧೬ ಬಿ. ಎಲ್. ಡಿ. ಇ. ಮೆಡಿಕಲ್ ಕಾಲೇಜು, ಬಿಜಾಪುರ	...	೧೩೨
	೧೭ ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ	...	೧೫೦

* ಮಾಹಿತಿ ದೊರಕಿರುವುದಿಲ್ಲ.

ಇ)	ಅ. ಜಾ	ಅ. ಪ
೧ ಬೆಂಗಳೂರು ಮೆಡಿಕಲ್ ಕಾಲೇಜು	೧೫೬	೩೧
೨ ಮೈಸೂರು ಮೆಡಿಕಲ್ ಕಾಲೇಜು	೮೩	೧೭
೩ ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ	೮೨	೧೪
೪ ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ	೭೮	೨೬
೫ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು	೨೫	೧೦
* ೬ ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು	...	...
* ೭ ಕೆಂಪೇಗೌಡ ಮೆಡಿಕಲ್ ಕಾಲೇಜು, ಬೆಂಗಳೂರು	...	...
೮ ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು	೧೮೫	೧೪
* ೯ ಕಸ್ತೂರ್ಬಾ ಮೆಡಿಕಲ್ ಕಾಲೇಜು, ಮಂಗಳೂರು, ಮಣಿಪಾಲ	...	...
೧೦ ಜೆ. ಜೆ. ಎಂ. ಮೆಡಿಕಲ್ ಕಾಲೇಜು, ದಾವಣಗೆರೆ	೫೦	೧೪
೧೧ ಜೆ. ಎನ್. ಮೆಡಿಕಲ್ ಕಾಲೇಜು ಬೆಳಗಾಂ	...	...
* ೧೨ ಎಂ. ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ	೪೪	...
೧೩ ಆಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ	೮	೧
* ೧೪ ಜೆ ಎಸ್ ಎಸ್ ಮೆಡಿಕಲ್ ಕಾಲೇಜು, ಮೈಸೂರು	...	...
* ೧೫ ಆದಿಚುಂಚನಗಿರಿ ಮೆಡಿಕಲ್ ಕಾಲೇಜು, ಬೆಳ್ಳೂರು ಮಂಡ್ಯ ಜಿಲ್ಲೆ	...	...
* ೧೬ ಬಿ ಎಲ್ ಡಿ ಇ ಮೆಡಿಕಲ್ ಕಾಲೇಜು, ಬಿಜಾಪುರ	...	...
* ೧೭ ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ	೭	...

ಈ)	ಒಟ್ಟು	ಸರ್ಕಾರ	ಖಾಸಗಿ
೧ ಬೆಂಗಳೂರು ಮೆಡಿಕಲ್ ಕಾಲೇಜು	೧೫೫	೧೫೫	...
೨ ಮೈಸೂರು ಮೆಡಿಕಲ್ ಕಾಲೇಜು	೧೩೫	೧೩೫	...
೩ ಬಳ್ಳಾರಿ ಮೆಡಿಕಲ್ ಕಾಲೇಜು	೧೩೦	೧೩೦	...
೪ ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ.	೧೩೦	೧೩೦	...
೫ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು	೬೦	...	೬೦
೬ ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜು	೧೪೦	೪೦	೧೦೦
೭ ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು	೧೫೦	೪೦	೧೧೦
೮ ಕೆಂಪೇಗೌಡ ಮೆಡಿಕಲ್ ಕಾಲೇಜು	೧೫೦	೪೦	೧೧೦
೯ ಜೆ ಜೆ ಎಂ ಮೆಡಿಕಲ್ ಕಾಲೇಜು	೨೨೦	೬೦	೧೬೦
೧೦ ಜೆ ಎನ್ ಮೆಡಿಕಲ್ ಕಾಲೇಜು	೧೫೫	೫೫	೧೦೦
೧೧ ಎಂ. ಆರ್. ಮೆಡಿಕಲ್ ಕಾಲೇಜು	೧೪೦	೫೭	೮೩
೧೨ ಕಸ್ತೂರ್ಬಾ ಮೆಡಿಕಲ್ ಕಾಲೇಜು	೨೯೧	...	೨೯೦
೧೩ ಆದಿಚುಂಚನಗಿರಿ ಮೆಡಿಕಲ್ ಕಾಲೇಜು	೧೫೦	೩೦	೧೨೦
೧೪ ಆಲ್ ಅಮೀನ್ ಮೆಡಿಕಲ್ ಕಾಲೇಜು	೧೨೦	೩೦	೯೦

* ಮಾಹಿತಿ ದೊರಕಿರುವುದಿಲ್ಲ.

೧೫ ಜೆ ಎಸ್ ಎಸ್ ಮೆಡಿಕಲ್ ಕಾಲೇಜು	೧೫೦	೩೦	೧೨೦
೧೬ ದೇವರಾಜ ಅರಸ್ ಮೆಡಿಕಲ್ ಕಾಲೇಜು	೧೩೦	೧೦	೧೨೦
೧೭ ಬಿ ಎಲ್ ಡಿ ಇ ಮೆಡಿಕಲ್ ಕಾಲೇಜು	೧೩೦	...	೧೩೦

ಸರ್ಕಾರಿ ಕಾಲೇಜುಗಳ ಸೀಟುಗಳಿಗೆ ಮತ್ತು ಖಾಸಗಿ ಕಾಲೇಜುಗಳಲ್ಲಿರುವ ಸರ್ಕಾರಿ ಸೀಟುಗಳಿಗೆ ಪ್ರವೇಶ ಉಚಿತವಾಗಿರುತ್ತೆ. (ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ವಿದ್ಯಾರ್ಥಿ ಮತ್ತು ಇತರ ಶುಲ್ಕ ಹೊರತು) ಖಾಸಗಿ ಕಾಲೇಜುಗಳ ಆಡಳಿತ ವರ್ಗಕ್ಕೆ ಸೇರಿದ ಸೀಟುಗಳ ಪೈಕಿ ಬಿ. ಎಲ್. ಡಿ. ಇ. ಕಾಲೇಜು, ಬಿಜಾಪುರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಉಚಿತ ಸೀಟುಗಳನ್ನು ಕೊಟ್ಟಿಲ್ಲ ಉಳಿದ ಖಾಸಗಿ ಕಾಲೇಜುಗಳಲ್ಲಿ ಕೊಟ್ಟಿರುವ ಉಚಿತ ಸೀಟುಗಳ ಬಗ್ಗೆ ಮಾಹಿತಿ ಬಂದಿರುವುದಿಲ್ಲ.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಬಗ್ಗೆ.

೧೩೭೩. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚೆಗೆ ನಡೆದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ಕಾನೂನು ಬಾಹಿರವಾಗಿ ಕರ್ತವ್ಯ ನಿರ್ವಹಿಸಿದ ಸರ್ಕಾರಿ ನೌಕರರ ಬಗ್ಗೆ ಸರ್ಕಾರದವರು ಕಾಪೂನು ಕ್ರಮ ಕೈಗೊಳ್ಳುವರೇ ?

ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕು ಶ್ರೀರಾಂಪುರ ಹೋಬಳಿ ಕಬ್ಬಳ್ ಮತ ಕೇಂದ್ರದಲ್ಲಿ ಚುನಾವಣಾ ಕಾರ್ಯದಲ್ಲಿ ನಿರತರಾಗಿದ್ದ ಸರ್ಕಾರೀ ನೌಕರರು ಅಕ್ರಮವಾಗಿ ಜೆರಿ ಮತ ಚಲಾಯಿಸಿದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಈ ನೌಕರರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ಅವರ ಮೇಲೆ ಕೋರ್ಟಿನಲ್ಲಿ ಮೊಕದ್ದಮೆ ದಾಖಲು ಮಾಡಲಾಗಿದೆ. ಅಲ್ಲದೆ ಅವರನ್ನು ಅಮಾನತ್ತಿನಲ್ಲಿ ಕೂಡಲೇ ಇಡಲಾಗಿದೆ.

ಸರ್ಕಾರ ಪತ್ರಿಕೆಗಳ ಮೂಲಕ ಜಾಹೀರಾತುಗಳ ಪ್ರಕಟಣೆಗೆ ಮಾಡಿದ ಖರ್ಚುಗಳ ಬಗ್ಗೆ.

೯೬೦. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ) ಮತ್ತು ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಸರ್ಕಾರದ ಜಾಹೀರಾತುಗಳಿಗಾಗಿ 'ಪ್ರಪಂಚ' ಮತ್ತು 'ವಿಶ್ವವಾಣಿ' ಪತ್ರಿಕೆಗಳಿಗೆ ಖರ್ಚು ಮಾಡಿದ ಹಣವೆಷ್ಟು ?

ಆ) ಇತರ ಪತ್ರಿಕೆಗಳಿಗೆ ಸರ್ಕಾರದ ಜಾಹೀರಾತುಗಳಿಗೆ ಹಣ ಪಾವತಿ ಮಾಡಿದ ವಿವರಗಳನ್ನು ಪತ್ರಿಕಾವಾರು ತಿಳಿಸಿ ?

ಇ) 'ಪ್ರಪಂಚ' ಮತ್ತು 'ವಿಶ್ವವಾಣಿ' ಪತ್ರಿಕೆಗಳಿಗೆ ನಿಗದಿಪಡಿಸಿದ ಜಾಹೀರಾತು ದರಗಳನ್ನು ಇತರ ಪತ್ರಿಕೆಗಳಿಗೆ ಹೋಲಿಸಿ ತಿಳಿಸಿ ?